1	2	3
25	ಬಳ್ಳಾರಿ	3102
26	ಗುಲ್ಬರ್ಗಾ	9924
27	ಬೀದರ್	29231
	ಒಟ್ಟು	**375923**

807 ಶ್ರೀ ಬಂಡೆಪ್ಪ ಕಾಶ್ಯಂಪೂರ್ ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಳೆದ ವರ್ಷದಿಂದ ಈವರೆವಿಗೆ ಬೀದರ್ ಜಿಲ್ಲೆಗೆ ಜಲಾನಯನ ಇಲಾಖೆಯಿಂದ ಬಿಡುಗಡೆಯಾದ ಅನುದಾನದ ಮೊತ್ತ ಎಷ್ಟು;

ಆ) ಈ ಯೋಜನೆಯಿಂದ ಯಾವ ಯಾವ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿದೆ (ವಿವರ ನೀಡುವುದು)

ಇ) ಬಿಡುಗಡೆಯಾದ ಅನುದಾನದಲ್ಲಿ ಎಲ್ಲಾ ಕಾಮಗಾರಿಗಳು ಪೂರ್ಣವಾಗಿದೆಯೇ;

ಈ) ಹಾಗಿದ್ದಲ್ಲಿ, ಪೂರ್ಣಗೊಂಡ ಮತ್ತು ಅಪೂರ್ಣಗೊಂಡಿರುವ ಕಾಮಗಾರಿಗಳು ಯಾವುವು; (ವಿವರ ನೀಡುವುದು)

ಉ) ಈ ಯೋಜನೆಗೆ ಬಿಡುಗಡೆಯಾದ ಅನುದಾನದಲ್ಲಿ ಖರ್ಚಾಗಿರುವ ಮತ್ತು ಬಾಕಿ ಉಳಿದಿರುವ ಮೊತ್ತ ಎಷ್ಟು?

ಶ್ರೀ ಎಸ್.ಎ. ರವೀಂದ್ರನಾಥ್ (ಕೃಷಿ ಸಚಿವರು)

ಅ) ಕಳೆದ ವರ್ಷದಿಂದ ಈ ವರೆವಿಗೆ ಜಲಾನಯನ ಇಲಾಖೆಯಿಂದ ರೂ.746.30 ಲಕ್ಷ ಅನುದಾನ ಬಿಡುಗಡೆಯಾಗಿದೆ.

ಆ) ಈ ಯೋಜನೆಯಿಂದ ಸಮಪಾತಳಿ ಬದು, ಕೊರಕಲು ತಡೆ, ತಡೆಅಣೆ, ಕೃಷಿ ಹೊಂಡ, ವೇಸ್ಟ್ ವೇರ್, ತೋಟಗಾರಿಕೆ, ಅರಣ್ಯ, ಪಶು ಆರೋಗ್ಯ ಶಿಬಿರ ಹಾಗೂ ಮೇವು ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ.

ಇ) ಇಲ್ಲ.

ಈ) **ಪೂರ್ಣಗೊಂಡಿರುವ ಕಾಮಗಾರಿಗಳು:**

ಕ್ರ. ಸಂ.	ಕಾಮಗಾರಿ ಹೆಸರು	ಭೌತಿಕ ಸಂಖ್ಯೆ/ಹೆ.
1	2	3
1	ಸಮಪಾತಳಿ ಬದು	2700 ಹೆ.
2	ಕೊರಕಲು ತಡೆ	989 ಸಂ.
3	ತಡೆ ಅಣೆ	18 ಸಂ.
4	ಕೃಷಿ ಹೊಂಡ	1404 ಸಂ
5	ವೆಸ್ಟ್ ವೇರ್	589 ಸಂ.
6	ತೋಟಗಾರಿಕೆ	570.36
7	ಅರಣ್ಯ	1597.3 ಹೆ.
8	ಪಶು ಆರೋಗ್ಯ ಶಿಬಿರ ಹಾಗೂ ಮೇವು ಅಭಿವೃದ್ಧಿ	54 ಸಂ.

ಅಪೂರ್ಣಗೊಂಡಿರುವ ಕಾಮಗಾರಿಗಳು:

1	2	3
1	ಸಮಪಾತಳಿ ಬದು	540 ಹೆ
2	ಕೊರಕಲು ತಡೆ	240 ಸಂ.
3	ತಡೆ ಅಣೆ	20 ಸಂ.
4	ತೋಟಗಾರಿಕೆ	570.36 ಹೆ
5	ಅರಣ್ಯ	1597.3 ಹೆ
6	ಪಶು ಆರೋಗ್ಯ ಶಿಬಿರ	14 ಸಂ.

ಊ) ಈ ಯೋಜನೆಗೆ ಬಿಡುಗಡೆಯಾದ ಅನುದಾನದಲ್ಲಿ ಒಟ್ಟು ರೂ.570.850 ಲಕ್ಷ ಅನುದಾನ ಖರ್ಚಾಗಿದ್ದು, ರೂ. 175.45 ಲಕ್ಷ ಬಾಕಿ ಉಳಿದಿರುತ್ತದೆ.

1122 ಶ್ರೀ ಅಮರೇಶ್ ಮಾನ್ಯ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮುಳಬಾಗಿಲು ವಿಧನಸಭಾ ಕ್ಷೇತ್ರದಲ್ಲಿರುವ ಅಂಗನವಾಡಿ ಕೇಂದ್ರಗಳ ಸಂಖ್ಯೆ ಎಷ್ಟು; ಆ ಪೈಕಿ ಕಟ್ಟಡಗಳ ಕೊರತೆಯಿರುವ ಕೇಂದ್ರಗಳೆಷ್ಟು; (ವಿವರ ನೀಡುವುದು)